| ಸಚಿನ್ ಯಾದವ್ ಟಾಪ್ 10 ಸಾಧನೆ | | | |
|---|---|---|---|
| ಅಂತರ ಮೀಟರ್ | ವರ್ಷ | ಚಾಂಪಿಯನ್‌ಷಿಪ್/ಕೂಟ | ಸ್ಥಳ |
| 86.27 | 2025 | ವಿಶ್ವ ಅಥ್ಲೆಟಿಕ್ ಚಾಂಪಿಯನ್‌ಷಿಪ್ | ಟೋಕಿಯೊ |
| 85.16 | 2025 | ಏಷ್ಯನ್ ಅಥ್ಲೆಟಿಕ್ ಚಾಂಪಿಯನ್‌ಷಿಪ್ | ಗುಮಿ |
| 84.39 | 2025 | ರಾಷ್ಟ್ರೀಯ ಕ್ರೀಡಾಕೂಟ | ಡೆಹ್ರಾಡೂನ್ |
| 83.86 | 2025 | ರಾಷ್ಟ್ರೀಯ ಫೆಡರೇಷನ್ ಅಥ್ಲೆಟಿಕ್ ಕೂಟ | ಕೊಚ್ಚಿ |
| 83.67 | 2025 | ವಿಶ್ವ ಅಥ್ಲೆಟಿಕ್ ಚಾಂಪಿಯನ್‌ಷಿಪ್ | ಟೋಕಿಯೊ |
| 83.20 | 2025 | ಅಂತರರಾಜ್ಯ ಅಥ್ಲೆಟಿಕ್ ಚಾಂಪಿಯನ್‌ಷಿಪ್ | ಚೆನ್ನೈ |
| 82.69 | 2024 | ಇಂಡಿಯಾ ಗ್ರ್ಯಾನ್‌ಪ್ರಿ–3 | ಬೆಂಗಳೂರು |
| 82.33 | 2025 | ನೀರಜ್ ಚೋಪ್ರಾ ಕ್ಲಾಸಿಕ್ | ಬೆಂಗಳೂರು |
| 80.27 | 2023 | ಫೆಡರೇಷನ್ ಕಪ್ ಅಥ್ಲೆಟಿಕ್ ಚಾಂಪಿಯನ್‌ಷಿಪ್ | ರಾಂಚಿ |
| 80.04 | 2024 | ರಾಷ್ಟ್ರೀಯ ಮುಕ್ತ ಅಥ್ಲೆಟಿಕ್ ಚಾಂಪಿಯನ್‌ಷಿಪ್ | ಬೆಂಗಳೂರು |

ಕ್ರೀಡಾಪಂಡಿತರ ಆಶಯಗಳಿಗೆ ಭರವಸೆಯ ಮುದ್ರೆಯೊತ್ತಿದರು.

‘ಫಲಿತಾಂಶ ಏನೇ ಆಗಿರಲಿ, ಪಾಕಿಸ್ತಾನದ ಥ್ರೋವರ್‌ಗಿಂತ ನೀನು ಒಂದು ಹೆಜ್ಜೆ ಮುಂದೆ ಇರಬೇಕು’ ಎಂದು ಇಲ್ಲಿ ಕಣಕ್ಕೆ ಇಳಿಯುವ ಮೊದಲು ಸಚಿನ್‌ಗೆ ಕೋಚ್ ನವಲ್ ಸಿಂಗ್ ಸೂಚಿಸಿದ್ದರು. ನಾಲ್ಕನೇ ಸ್ಥಾನ ಗಳಿಸುವ ಮೂಲಕ ಅವರು ಗುರುವಿನ ಬಯಕೆ ಈಡೇರಿಸಿದ್ದರು. ಏಷ್ಯನ್ ಚಾಂಪಿಯನ್‌ಷಿಪ್‌ನ ಬೆಳ್ಳಿ ಪದಕ ವಿಜೇತ ಸಚಿನ್‌ಗೆ ಹೀಗೆ ಸ್ವಲ್ಪದರಲ್ಲೇ ಪದಕ ತಪ್ಪಿದ್ದು ಇದು ಮೊದಲೇನೂ ಅಲ್ಲ. ಏಷ್ಯನ್ ಚಾಂಪಿಯನ್‌ಷಿಪ್‌ನಲ್ಲಿ 1.24 ಮೀಟರ್ ಅಂತರದಲ್ಲಿ ಅವರಿಗೆ ಚಿನ್ನದ ಪದಕ ಕೈತಪ್ಪಿತ್ತು. ಬೆಂಗಳೂರಿನಲ್ಲಿ ನಡೆದ ನೀರಜ್ ಚೋಪ್ರಾ ಕ್ಲಾಸಿಕ್‌ನಲ್ಲಿ 2 ಮೀಟರ್ ಅಂತರದಲ್ಲಿ ಕಂಚಿನ ಪದಕ ಅವರ ಕೊರಳಿಗೆ ಬೀಳದೇ ಶ್ರೀಲಂಕಾದ ರಮೇಶ್ ಪತಿರಗೆ ಪಾಲಾಗಿತ್ತು.

### ಕ್ರಿಕೆಟ್‌ಗೆ ಬೈ; ಆಳ್ವಾಸ್‌ನಲ್ಲಿ ತಿರುವು

ಉತ್ತರ ಪ್ರದೇಶದ ಬಾಗ್ಪತ್ ಜಿಲ್ಲೆ ಖೇಕಡ ನಿವಾಸಿ ಸಚಿನ್ ಕ್ರಿಕೆಟ್ ಪ್ರೇಮಿಯಾಗಿದ್ದರು. 6 ಅಡಿ 5 ಇಂಚು ಎತ್ತರ ನಿಲುವಿನ ಅವರು ಒಂದು ದಿನ ಬ್ಯಾಟಿಂಗ್ ಮಾಡುತ್ತಿದ್ದಾಗ ಅವರ ತೋಳ್ಬಲ ಕಂಡ ಊರಿನ ಅಥ್ಲೀಟ್ ಸಂದೀಪ್, ಜಾವೆಲಿನ್ ಅಭ್ಯಾಸ ಮಾಡುವಂತೆ ತಿಳಿಸಿದರು. ಹಾಗೆ ಬದಲಾದ ಹಾದಿ ಪದವಿಗಾಗಿ ಮೂಡುಬಿದಿರೆಯ ಆಳ್ವಾಸ್ ಕಾಲೇಜಿಗೆ ಸೇರಿದ ನಂತರ ಬಹುದೊಡ್ಡ ತಿರುವು ಪಡೆಯಿತು.

ಐದು ವರ್ಷಗಳಿಂದ ಸಚಿನ್ ನಿರಂತರ ಮತ್ತು ಏರುಗತಿಯ ಸಾಧನೆ ಮಾಡುತ್ತಿದ್ದಾರೆ. 2020ರಲ್ಲಿ ಮೂಡುಬಿದಿರೆಯಲ್ಲಿ ನಡೆದ ಅಖಿಲ ಭಾರತ ವಿಶ್ವವಿದ್ಯಾಲಯಗಳ ಚಾಂಪಿಯನ್‌ಷಿಪ್‌ನಲ್ಲಿ ಚಿನ್ನ ಗೆದ್ದಿದ್ದ ಅವರು 67.86 ಮೀಟರ್ ಸಾಧನೆಯೊಂದಿಗೆ 629 ಸ್ಕೋರ್ ಕಲೆ ಹಾಕಿದ್ದರು. ಮುಂದಿನ ವರ್ಷ ಪಟಿಯಾಲದಲ್ಲಿ ನಡೆದ ಫೆಡರೇಷನ್ ಕಪ್‌ನಲ್ಲಿ 68.37 ಮೀಟರ್‌ನೊಂದಿಗೆ ಅವರ ಪಾಯಿಂಟ್‌ಗಳು 636ಕ್ಕೆ ಏರಿದ್ದವು. 2022ರಲ್ಲಿ ಭುವನೇಶ್ವರದಲ್ಲಿ ನಡೆದ ಅಖಿಲ ಭಾರತ ಅಂತರ ವಿವಿ ಚಾಂಪಿಯನ್‌ಷಿಪ್‌ನಲ್ಲಿ ಸಾಮರ್ಥ್ಯ 74.26 ಮೀಟರ್‌ಗೆ ಏರಿತು. ರಾಂಚಿಯಲ್ಲಿ 2023ರಲ್ಲಿ ನಡೆದ ಫೆಡರೇಷನ್ ಕಪ್‌ನಲ್ಲಿ 80.27 ಮೀಟರ್, 2024ರಲ್ಲಿ ಬೆಂಗಳೂರಿನ ಕಂಠೀರವ ಕ್ರೀಡಾಂಗಣದಲ್ಲಿ ನಡೆದ ಇಂಡಿಯಾ ಗ್ರ್ಯಾನ್ ಪ್ರಿ–3ರಲ್ಲಿ 82.69 ಮೀಟರ್ ಸಾಧನೆ ಮಾಡಿದರು.

ಪೊಲೀಸ್ ಕಾನ್‌ಸ್ಟೆಬಲ್ ಆಗಿರುವ ಸಚಿನ್ ಜಾವೆಲಿನ್‌ನಲ್ಲಿ ಸದ್ಯ ವಿಶ್ವದ 17ನೇ ರ‍್ಯಾಂಕ್ ಹೊಂದಿದ್ದು ಒಟ್ಟಾರೆ ಅಥ್ಲೀಟ್‌ಗಳ ಪಟ್ಟಿಯಲ್ಲಿ 779ನೇ ಸ್ಥಾನದಲ್ಲಿದ್ದಾರೆ. ಟೋಕಿಯೊದಲ್ಲಿ ಅವರು ಎಸೆದ 86.27 ಮೀಟರ್ ಅವರ ಜೀವನಶ್ರೇಷ್ಠ ಥ್ರೋ. ಈಗ ಅವರ ಪಾಯಿಂಟ್‌ಗಳು 1190ಕ್ಕೆ ಏರಿವೆ. 25 ವರ್ಷದ ಸಚಿನ್ ಅವರದು ಜಾವೆಲಿನ್‌ಗೆ ಸಂಬಂಧಿಸಿ ‘ಟೇಲರ್ ಮೇಡ್’ ದೇಹ ಎಂದು ಬಣ್ಣಿಸಿದವರಿದ್ದಾರೆ. ಆದ್ದರಿಂದಲೇ ವಿಶ್ವದ ಶ್ರೇಷ್ಠ ಜಾವೆಲಿನ್ ಪಟು, 1984ರಲ್ಲಿ 104.8 ಮೀಟರ್ ದೂರ ಎಸೆದು ದಾಖಲೆ ಬರೆದಿರುವ ಜರ್ಮನಿಯ ವುವೆ ಹಾನ್ ಕೂಡ ಸಚಿನ್ ಮೇಲೆ ಭರವಸೆ ಹೊಂದಿದ್ದಾರೆ.

‘ಸಚಿನ್ ತೋಳಿನಲ್ಲಿ 95 ಮೀಟರ್‌ಗೂ ಮೀರಿದ ಸಾಧನೆ ಮಾಡುವ ತಾಕತ್ತು ಇದೆ. ಉತ್ತಮ ತಂತ್ರಗಳು ಮತ್ತು ಜಾವೆಲಿನ್ ಥ್ರೋಗೆ ಬೇಕಾದ ಅನೇಕ ಅಂಶಗಳನ್ನು ಹೊಂದಿರುವ ಸಚಿನ್‌ಗೆ ಪೂರಕ ವಾತಾವರಣ ನಿರ್ಮಿಸಿಕೊಟ್ಟರೆ ನನ್ನನ್ನು ಮತ್ತು ಜಾನ್ ಜೆಲೆಜ್ನಿಯನ್ನು (98.48 ಮೀ; 1996) ಹಿಂದಿಕ್ಕುವ ಸಾಧ್ಯತೆಗಳು ನಿಚ್ಚಳವಾಗಿವೆ’ ಎಂದು ನೀರಜ್ ಚೋಪ್ರಾ ಅವರ ಮಾಜಿ ಕೋಚ್ ಕೂಡ ಆಗಿರುವ ವುವೆ ಹಾನ್ ಹೇಳಿದ್ದಾರೆ. ಹಾರೈಕೆ ರೂಪದ ಈ ಮಾತು ಸತ್ಯವಾಗಲಿ ಎಂಬುದು ಭಾರತದ ಅಥ್ಲೆಟಿಕ್ ಕ್ಷೇತ್ರದ ಕಾತರ. ■




